PW- 09

CW-14

<u>ದಿನಾಂಕ**: 23.07.2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ ಶ್ರೀ ಎಸ್ ಆರ್ ಹೆಚ್ ಆರೋಪಿ ಪರ ವಕೀಲರಿಂದಃ</u>

1. ಮೃತ ಶಾಂತಾಬಾಯಿ 4 ಜನ ಮಕ್ಕಳು ಏಕೆ ಪ್ರತ್ಯೇಕವಾಗಿ ವಾಸ ಮಾಡುತ್ತಾರೆ ಎಂದು ನನಗೆ ಗೊತ್ತಿದೆ. ನನಗೆ ಸದರಿ 4 ಜನ ಏಕೆ ತಮ್ಮ ತಾಯಿಯನ್ನು ಒಬ್ಬಂಟಿಯಾಗಿ ಬಿಟ್ಟು ಏಕೆ ಪ್ರತ್ಯೇಕವಾಗಿ ವಾಸ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ತಾಯಿ ಮತ್ತು ಮಕ್ಕಳ ಮದ್ಯೆ ಮನಸ್ತಾಪ ಇದ್ದಾಗ ತಾಯಿಯನ್ನು ಬಿಟ್ಟು ಬೇರೆ ವಾಸ ಮಾಡುತ್ತಾರೆ ಎಂದರೆ ಸರಿ. ಮೃತ ಶಾಂತಾಬಾಯಿ ಹಾಗೂ ಅವಳ ಮಕ್ಕಳ ಮದ್ಯೆ ವೈಮನಸ್ಸು ಇತ್ತು ಎಂದರೆ ನನಗೆ ಗೊತ್ತಿಲ್ಲ. ಆ ಕಾರಣದಿಂದ ಅವರ ಮಕ್ಕಳು ಪ್ರತ್ಯೇಕವಾಗಿ ವಾಸಿಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ.

2. ನನಗೆ ಪ್ರಾಸಾ-3 ಮದುಕೇಶ್ವರ ಇವರು ಅವರು ಮೃತ ಶಾಂತಾಬಾಯಿ ತೀರಿಹೋದ ವಿಷಯ ದೂರವಾಣಿ ಮೂಲಕ ತಿಳಿಸಿದರು. ಹೇಗೆ ತೀರಿಕೊಂಡಿರುತ್ತಾರೆಂದು ನನಗೆ ಹೇಳಿಲ್ಲ. ನಾನು ಪೋಲಿಸರ ಮುಂದೆ "ಮೃತ ಶಾಂತಾಬಾಯಿ ಹೃದಯಾಘಾತದಿಂದ ಮರಣ ಹೊಂದಿರುತ್ತಾರೆ ಎಂದು ಪ್ರಾಸಾ-3 ಮದುಕೇಶ್ವರ ತಿಳಿಸಿರುತ್ತಾರೆ" ಎಂದು ಹೇಳಿಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಡಿ-4 ಎಂದು ಗುರುತಿಸಲಾಯಿತು.

3. ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ಪೋಲಿಸರು ನನ್ನನ್ನು ವಿಚಾರಿಸಿಲ್ಲ. ನಾನು , ನನ್ನ ಅಣ್ಣ ಮದುಕೇಶ್ವರ , ತಮ್ಮ ರಾಮ ಹಾಗೂ ನನ್ನ ಹೆಂಡತಿ ವಿಜಯಲಕ್ಷ್ಮೀ ಘಟನಾ ಸ್ಥಳಕ್ಕೆ ಬಂದಿರುತ್ತೇವೆ. ನಾವು ಬೆಳಿಗ್ಗೆ 11.00 – 11.30 ಸುಮಾರಿಗೆ ಘಟನಾ ಸ್ಥಳಕ್ಕೆ ಬಂದಿರುತ್ತೇವೆ. ನಾವು ಅಲ್ಲಿ ಬಂದಾಗ ಪೋಲಿಸರು ಹಾಗೂ ಬಹಳಷ್ಟು ಜನರು ಇದ್ದರು. ಮನೆಯ ಒಳಗೆ ಪೋಲಿಸರು ಮಾತ್ರ ಇದ್ದರು. ನನ್ನ ಅಳಿಯಂದಿರು ಆ ಸಮಯದಲ್ಲಿ ಮನೆಯ ಹೊರಗೆ ಇದ್ದರು.

4. ನನ್ನ ಅಕ್ಕ ಮೃತ ಶಾಂತಾಬಾಯಿ ಶವವನ್ನು ನೋಡಿದಾಗ ಅದು ಕೊಲೆ ಎಂದು ಕಂಡು ಬಂದಿತು. ನಾನು ಮೃತ ಶಾಂತಾಬಾಯಿ ಮಕ್ಕಳಿಗೆ ದೂರು ಏನಾದರೂ ಕೊಟ್ಟಿರುತ್ತೀರಾ ಎಂದು ಕೇಳಿರುವುದಿಲ್ಲ. ದೂರನ್ನು ಏಕೆ ಕೊಟ್ಟಿಲ್ಲ ಎಂದು ನಾನು ನನ್ನ ಅಕ್ಕ ಮೃತ ಶಾಂತಾಬಾಯಿ ಮಕ್ಕಳಿಗೆ ಕೇಳಿಲ್ಲ. ಪೋಲಿಸರನ್ನು ಸ್ಥಳಕ್ಕೆ ಯಾರು ಕರೆಸಿದ್ದರು ಎಂದು ನಾನು ವಿಚಾರಿಸಿಲ್ಲ.

5. ಪೋಲಿಸರು ನನ್ನ ಸಮಕ್ಷಮ ಯಾವುದೇ ಪ್ರಕ್ರಿಯೇ ಮಾಡಿಲ್ಲ. ನಾನು ಮೃತ ಶಾಂತಾಬಾಯಿ ಮನೆಯಲ್ಲಿ 5 – 10 ನಿಮಿಷಗಳ ಕಾಲ ಇದ್ದೆ. ನಂತರ ನಾನು ರಸ್ತೆಯ ಮೇಲೆ ನಿಂತುಕೊಂಡಿದ್ದೆ. ನಾನು ಶವವನ್ನು ಮರಣೋತ್ತರ ಪರೀಕ್ಷೆ ಕಳುಹಿಸವವರೆಗೆ ಅಲ್ಲಿಯೇ ನಿಂತಿದ್ದೆ. ನಾನು ಮರಣೋತ್ತರ ಪರೀಕ್ಷೆಯ ಸಮಯಕ್ಕೆ ಆಸ್ಪತ್ರೆಗೆ ಹೋಗಿಲ್ಲ. ನಾನು ಪೋಲಿಸರಿಗೆ ದೂರು ನೀಡಲು ಠಾಣೆಗೆ ಹೋಗಿಲ್ಲ. ನನಗೆ ದೂರನ್ನು ನನ್ನ ತಮ್ಮ ಕೊಟ್ಟಿರುತ್ತಾನೆ ಎಂದು ತಿಳಿದು ಬಂದಿತು. ನನ್ನ ತಮ್ಮ ದೂರನ್ನು ಅದೇ ದಿನದಂದು ಕೊಟ್ಟಿದ್ದು , ಎಷ್ಟು ಗಂಟೆಗೆ ಕೊಟ್ಟಿರುತ್ತಾನೆ ಎಂದು ನೆನಪಿಲ್ಲ.

6. ಮೃತ ಶಾಂತಾಬಾಯಿಯ ಎಡಗೆನ್ನೆಗೆ ಚೂರಿದ ಗಾಯ ಇದ್ದು , ಬಾಯಿಯಿಂದ ರಕ್ತ ಬಂದಿತ್ತು. ತಲೆದಿಂತು ಕೆಳಗೆ ಬಿದ್ದಿತ್ತು. ಒಂದು ಆರಿದ ದೀಪ ಅವಳು ತೀರಿಕೊಂಡ ಕೊಠಡಿಯಲ್ಲಿ ಇತ್ತು. ಒಂದು ಸೀಲೆಂಡರ್ ಇದ್ದು , ಅದರ ಪೈಪ್ ಕಳಚಿತ್ತು. ಅದು ಸಹ ಅದೆ ಕೊಠಡಿಯಲ್ಲಿ ಇತ್ತು.

7. ನಾನು ಒಂದು ಆರಿದ ದೀಪ ಅವಳು ತೀರಿಕೊಂಡ ಕೊಠಡಿಯಲ್ಲಿ ಇತ್ತು, ಒಂದು ಸೀಲೆಂಡರ್ ಇದ್ದು , ಅದರ ಪೈಪ್ ಕಳಚಿತ್ತು, ಅದು ಸಹ ಅದೆ ಕೊಠಡಿಯಲ್ಲಿ ಇತ್ತು ಎಂದು ನಾನು ಪೋಲಿಸರ ಮುಂದೆ ಹೇಳಿಕೆ ಕೊಟ್ಟಿಲ್ಲ. ಏಕೆಂದರೆ ಪೋಲಿಸರು ನನಗೆ ಕೇಳಿರುವುದಿಲ್ಲ. ಸೀಲೆಂಡರ ಪೈಪ್ ರೇಗುಲೇಟರ ಹತ್ತಿರ ಕಳಚಿತ್ತು. ಆ ಕೊಠಡಿಯಲ್ಲಿ ಅಡುಗೆ ಮಾಡುವ ಗ್ಯಾಸ್ ಸ್ಟೋವ್ ಇರುವುದನ್ನು ನಾನು ಕಂಡಿಲ್ಲ. ನಾನು ಆ ಕೊಠಡಿಗೆ ಹೋದಾಗ ಗ್ಯಾಸ ವಾಸನೆ ಬರುತ್ತಿರಲಿಲ್ಲ.

8. ಮೃತ ಶಾಂತಾಬಾಯಿ ಮನೆಯನ್ನು ನಾನು ಅವತ್ತೇ ಮೊದಲ ಬಾರಿಗೆ ನೋಡಿದ್ದೆ. ಈ ಮೊದಲು ನೋಡಿರುವುದಿಲ್ಲ. ಅಡುಗೆ ಮನೆ ಪ್ರತ್ಯೇಕವಾಗಿದೆಯೇ ಎಂಬ ಕಲ್ಪನೆ ನನಗೆ ಇಲ್ಲ. ಆ ಮನೆಯಲ್ಲಿ 2 – 3 ಕೊಠಡಿಗಳು ಇರಬಹುದು. ಮೃತ ಶಾಂತಾಬಾಯಿ ಶವ ಇದ್ದ ಕೊಠಡಿ ಎರಡನೇ ಕೊಠಡಿಯಾಗಿತ್ತು.

9. ಹೊಸ್ತಿಲಿಗೆ ಪೂಜೆ ಮಾಡುವ ಪದ್ಧತಿ ಇರುತ್ತದೆ ಎಂದರೆ ಸರಿ. ಸಾಯಂಕಾಲ ಹೊಸ್ತಿಲಿಗೆ ದೀಪ ಹಚ್ಚುತ್ತಾರೆ ಎಂದರೆ ಸರಿ. ಮೃತ ಶಾಂತಾಬಾಯಿಯನ್ನು ಯಾರು ಕೊಲೆ ಮಾಡಿರುತ್ತಾರೆ ಎಂದು ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. ಪೋಲಿಸರು ಆರೋಪಿ ಕೊಲೆ ಮಾಡಿರುತ್ತಾನೆಂದು ಹೇಳಿದ ಆಧಾರದ ಮೇಲೆ ನಾನು ಈ ನ್ಯಾಯಾಲಯದ ಮುಂದೆ ಹೇಳಿರುತ್ತೇನೆ ಎಂದರೆ ಸರಿ. ಪೋಲಿಸರು ಬಂಗಾರವನ್ನು ಹೇಗೆ ತಂದರು, ಯಾರಿಂದ ತಂದರು ಎಂದು ನನಗೆ ಮಾಹಿತಿ ಇಲ್ಲ.

10. ನನ್ನ ಅಕ್ಕನ ಮಗಳು ಗೀತಾ ಘಟನೆಯ ನಂತರ ನನಗೆ ಆರೋಪಿ , ಅವನ ಹೆಂಡತಿ ಹಾಗೂ ಒಬ್ಬ ಹೆಣ್ಣು ಮಗಳು ನನ್ನ ಅಕ್ಕ ಮೃತ ಶಾಂತಾಬಾಯಿಯ ಮನೆಗೆ ಬಾಡಿಗೆಗೆ ಬಂದಿದ್ದರು ಎಂದು ತಿಳಿಸಿದಳು. ನನ್ನ ಅಕ್ಕ ಮೃತ ಶಾಂತಾಬಾಯಿಯ ಸಾವಿನ 2 – 3 ದಿನಗಳ ನಂತರ ನನ್ನ ಅಕ್ಕನ ಮಗಳು ನನಗೆ ಈ ವಿಷಯವನ್ನು ತಿಳಿಸಿದಳು.

11. ನಾನು ಪೋಲಿಸರಿಗೆ " ನನ್ನ ಅಕ್ಕನ ಮನೆಗೆ ಆರೋಪಿ ಹಾಗೂ ಅವನ ಹೆಂಡತಿ ಬಂದು ನಮ್ಮ ಅಕ್ಕನ ಮನೆಗೆ ಒಂದು ವಾರದ ಹಿಂದೆ ಬಂದು ನಿಮ್ಮ ಅಟ್ಟದ ಮನೆಯನ್ನು ಕಚೇರಿ ಮಾಡಿಕೊಳ್ಳುತ್ತೇವೆ ಬಾಡಿಗೆ ಕೊಡಿ ಎಂದು ಕೇಳಿದರು, ಒಂದು ಸಲ ಮೆಡಮ್ ಬರುತ್ತಾರೆ ಎಂದು ಹೇಳಿ ಒಂದು ಹೆಣ್ಣು ಮಗಳನ್ನು ಕರೆದುಕೊಂಡು ಬಂದಿರುತ್ತಾರೆ ಎಂದು ನನಗೆ ಹೇಳಿದಳು" ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕಯ ಭಾಗವನ್ನು ನಿಡಿ-5 ಎಂದು ಗುರುತಿಸಲಾಯಿತು.

12. ನಾನು ಪೋಲಿಸರ ಮುಂದೆ "ದಿ:16.08.2019 ರಂದು ರಾತ್ರಿ 11.30 ರ ಸುಮಾರಿಗೆ ಅವಳ ಮನಗೆ ಬಂದು ಅವಳೊಂದಿಗೆ ಮಾತನಾಡಿಸುವ ನೆಪ ಮಾಡಿ ಅವಳ ಮೈಮೇಲಿನ ಆಬರಣಗಳನ್ನು ಕಿತ್ತುಕೊಳ್ಳಲು ಪ್ರಯತ್ನ ಮಾಡಿದ್ದು, ಅವಳು ಕೊಡದೇ ಇದ್ದಾಗ ಇಬ್ಬರು ಸೇರಿ ಅವಳ ಮನೆಯ ಮಂಚಕ್ಕೆ ಕೈಯನ್ನು ಕಟ್ಟಿ , ಕುತ್ತಿಗೆಗೆ ಮತ್ತು ಕಣ್ಣಿಗೆ ಸೀರೆಯಿಂದ ಬಿಗಿದು , ತಲೆದಿಂಬಿನಿಂದ ಉಸಿರುಗಟ್ಟಿಸಿ ಕೊಲೆ ಮಾಡಿದ್ದು, ಆಗ ದಿ:17.08.2019 ಬೆಳಗಿನ ಜಾವ 3.00 ಗಂಟೆಯಾಗಿದ್ದು ನಂತರ ಅವಳ ಮೈ ಮೇಲೆ ಇದ್ದ ಬಳೆ ಮತ್ತು ಚೈನ ಸರವನ್ನು ಕಿತ್ತುಕೊಂಡು ಆರೋಪಿತರು ತಮ್ಮ ವಾಸದ ಮನೆಯಲ್ಲಿ ಇಟ್ಟು ನಂತರ ವಿಷಯ ಗೊತ್ತಾದರೆ ತಮ್ಮನ್ನು ಉಳಿಸುವುದಿಲ್ಲ ಎಂದು ತಿಳಿದು, ಆರೋಪಿ ತನ್ನ ಮಕ್ಕಳನ್ನು ಮೊದಲು ಊರಿಗೆ ಕಳುಹಿಸಿಕೊಟ್ಟು ನಂತರ ಅವರಿಬ್ಬರು ಸಹ ಮನೆಯಿಂದ ಹೊರಟು ಹುಬ್ಬಳ್ಳಿಯ ಉಣಕಲ್ ಕೆರೆಗೆ ಹೋಗಿ , ತಮ್ಮ ಮಕ್ಕಳನ್ನ ಕರೆಸಿಕೊಂಡು ಮೃತ ಶಾಂತಾಬಾಯಿಯನ್ನು ಕೊಲೆ ಮಾಡಿದ ವಿಷಯ ಹೇಳಿ ನಂತರ ವಿಷ ಕುಡಿದು ಸಾಯಲು ಪ್ರಯತ್ನಿಸಿದರು " ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಡಿ-6 ಎಂದು ಗುರುತಿಸಲಾಯಿತು.

13. ನನಗೆ ಮೇಲೆ ಓದಿ ಹೇಳಿದ ವಿಷಯ ಪೋಲಿಸರಿಂದ ಗೊತ್ತಾಯಿತು ಎಂದರೆ ಸರಿ. ನನಗೆ ನನ್ನ ಅಕ್ಕ ಪ್ರತಿದಿನ ಯಾವ ಆಭರಣಗಳನ್ನು ಧರಿಸುತ್ತಿದ್ದಳು ಎಂಬ ಬಗ್ಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. ನಿಪಿ-4 ಮತ್ತು 5 ರಲ್ಲಿಕಾಣಿಸಿರುವ ಬಳೆಗಳನ್ನು ಮಾರುಕಟ್ಟೆಯಲ್ಲಿ ಹೇಳಿ ಮಾಡಿಸಬಹುದು ಎಂದರೆ ಸರಿ. ಮುಮಾ-4 ರಿಂದ 16 ತರಹ ವಸ್ತುಗಳು ಮಾರುಕಟ್ಟೆಯಲ್ಲಿ ಸಿಗುತ್ತವೆ ಎಂದರೆ ಸರಿ.

14. ನನ್ನ ಅಕ್ಕ ಶಾಂತಾಬಾಯಿ ಮತ್ತು ಅವರ ಮಕ್ಕಳ ಮದ್ಯೆ ಆಸ್ತಿಗೆ ಸಂಬಂದಿಸಿದಂತೆ ಮನಸ್ತಾಪ ಇದ್ದು ನಾನು ಮತ್ತು ನನ್ನ ಸೋದರರು ಈ ವಿಷಯವಾಗಿ ಪಂಚಾಯಿತಿ ಮಾಡಿದ್ದೆವು ಎಂದರೆ ಸರಿಯಲ್ಲ. ಘಟನೆಯಾದ ದಿನ ನನ್ನ ಸಹೋದರಿ ಹಾಗೂ ಅವಳ ಮಕ್ಕಳ ಮದ್ಯೆ ಆಸ್ತಿ ವಿಚಾರವಾಗಿ ಗಲಾಟೆಯಾಗಿ ಈ ಅಹಿತಕರ ಘಟನೆ ನಡೆಯಿತು ಎಂದರೆ ಸರಿಯಲ್ಲ. ಆ ಕಾರಣದಿಂದ ಸದರಿಯವರು ನಮ್ಮ ಅಕ್ಕನಿಗೆ ಹೃದಯಾಘಾತವಾಗಿತ್ತು ಎಂದು ಕರೆ ಮಾಡಿದ್ದರು ಎಂದರೆ ಸರಿಯಲ್ಲ. ನಮ್ಮ ಅಳಿಯಂದಿರನ್ನು ರಕ್ಷಣೆ ಮಾಡುವ ಉದ್ದೇಶದಿಂದ ಯಾರೊ ದುಷ್ಕರ್ಮಿಗಳು ನನ್ನ ಅಕ್ಕನನ್ನು ಕೊಲೆ ಮಾಡಿರುತ್ತಾರೆಂದು ದೂರನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ. ಪೋಲಿಸರ ಜೊತೆ ಶಾಮಿಲಾಗಿ ಆರೋಪಿಯನ್ನು ಈ ಪ್ರಕರಣದಲ್ಲಿ ಸಿಲುಕಿಸಲಾಗಿದೆ ಎಂದರೆ ಸರಿಯಲ್ಲ.

15. ನಾನು ಘಟನೆಯಾದ ದಿನ ಆರೋಪಿ ಮನೆಗೆ ಹೋಗಿಲ್ಲ. ಆರೋಪಿಯ ಹೆಂಡತಿ ಸುಧಾಳಿಗೆ ತುಂಬಾ ಹೊಟ್ಟೆನೋವು ಬರುತ್ತಿತ್ತು ಎಂದರೆ ಸರಿಯಲ್ಲ. ಆ ಕಾರಣದಿಂದಾಗಿ ಅವಳ ವಿಷ ಸೇವಿಸಿದ್ದಳು ಎಂದರೆ ಸರಿಯಲ್ಲ. ಅವಳು ವಿಷ ತೆಗೆದುಕೊಂಡ ಕಾರಣ ಆರೋಪಿ ಅವಳ ಮೇಲೇ ತುಂಬಾ ಪ್ರೀತಿ ಇರುವುದರಿಂದ ತಾನು ವಿಷ ಸೇವಿಸಿದ ಎಂದರೆ ಸರಿಯಲ್ಲ.

16. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ನಾನು ನನ್ನ ಸಹೋದರ ನೀಡಿದ ಸುಳ್ಳು ದೂರಿಗೆ ಅನುಗುಣವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

(ಅಶ್ವಿನಿ ವಿಜಯ ಶಿರಿಯಣ್ಣನವರ)
ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ಎಫ್.ಟಿ.ಎಸ್.ಸಿ-1
ಹಾವೇರಿ.